ಶ್ರೀ ವೀರೇಂದ್ರ ಪಾಟೀಲ್.—ಪ್ಲಾನಿಂಗ್ ಕಮಿಷನ್‌ನವರು ಬಂದಾಗ ಹೇಳಿದ್ದೇವೆ ಮತ್ತು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನ ಮೀಟಿಂಗಿಗೆ ಹೋದಾಗಲೆಲ್ಲಾ ಕೇಂದ್ರದವರ ಮೇಲೆ ಒತ್ತಾಯ ಮಾಡುತ್ತಿದ್ದೇವೆ ನಮ್ಮ ಇರಿಗೇಷನ್ ಪ್ರಾಜೆಕ್ಟ್‌ನ ಪ್ರಮಾಣ ಬಹಳ ಕಡಿಮೆ ಇದೆ ಇದನ್ನು ಹೆಚ್ಚು ಮಾಡಲು ಸಹಾಯ ಮಾಡಬೇಕು ಎಂದು ಹೇಳುತ್ತಲೇ ಇದ್ದೇವೆ. ಇರಿಗೇಷನ್ ಮೇಲೆ ಹೆಚ್ಚು ಹಣ ಕೊಡದೇ ಇದ್ದರೆ ನಮಗೆ ಅನುಕೂಲವಾಗುವುದಿಲ್ಲ ಈಗ ಕೊಡುವ ಹಣದ ಪ್ರಮಾಣವನ್ನು ಹೆಚ್ಚು ಮಾಡಬೇಕೆಂದು ಮೈನರ್ ಇರಿಗೇಷನ್‌ಗೆ ಸಹಾಯ ಮಾಡಬೇಕೆಂದೂ ನಾನು ಹೇಳುತ್ತಿದ್ದೇನೆ.

ಶ್ರೀ ಶರಣಗೌಡ ಇನಾಂದಾರ್.—ಟೆಂಡರ್ ಕರೆದಿರತಕ್ಕ ಒಟ್ಟು ಹಣವೆಷ್ಟು ಮತ್ತು ಬರಬಿದ್ದಿರತಕ್ಕ ಪ್ರದೇಶದಲ್ಲಿ ಹೆಚ್ಚುಹಣ ಒದಗಿಸುವುದಕ್ಕೆ ಏನು ಪ್ರಯತ್ನಮಾಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಟೆಂಡರ್ ಪೇಪರ್ ತಯಾರಾಗುತ್ತಿದೆ. ಬಹುಶ: 12-14 ಕೋಟಿ ರೂಪಾಯಿಗಳ ಟೆಂಡರ್ ತಯಾರಾಗುತ್ತಿರುವಂತೆ ಕಂಡುಬರುತ್ತಿದೆ.

ಶ್ರೀ ಕೆ. ಸಂಗನಗೌಡ.—ಲೆಫ್ಟ್ ಬ್ಯಾಂಕ್ ಕೆಲಸ ನಡೆಯುತ್ತಿದ್ದರೆ ರೈಟ್‌ಬ್ಯಾಂಕ್ ಕೆಲಸ ನಡೆಸುವುದಕ್ಕೆ ಏನು ತೊಂದರೆ ಇದೆ ?

ಶ್ರೀ ವೀರೇಂದ್ರ ಪಾಟೀಲ್.—ಎಡನಾಲೆಯಲ್ಲಿ ಎಷ್ಟು ದೂರ ಬೇಕಾದರೂ ಹೋಗುತ್ತದೆ. ಅದರಲ್ಲಿ ನೀರಿನ ಅನುಕೂಲಕ್ಕೇನೂ ಅಡಚಣೆಯಿಲ್ಲ. ಆದರೆ ಮುಂದೆ ನೀರಿನ ಅನುಕೂಲ ನೋಡಿಕೊಂಡು ಎರಡನೇ ಸ್ಟೇಜಿನಲ್ಲಿ ಅದನ್ನು ಪ್ರಾರಂಭಮಾಡೋಣ ಅಂತ ಅಂದುಕೊಡಿದ್ದೇವೆ.

ಶ್ರೀ ಎಸ್. ಎಸ್. ಅರಕೇರಿ.—ಎಡದಂಡೆಯಿಂದ ಎಷ್ಟು ಎಕರೆ ನೀರಾವರಿ ಆಗುತ್ತೆ, ಮತ್ತು ಯಾವ ಯಾವ ಪ್ರದೇಶಕ್ಕೆ ಅನುಕೂಲವಾಗುತ್ತೆ ?

ಶ್ರೀ ವೀರೇಂದ್ರ ಪಾಟೀಲ್.—110 ಲಕ್ಷ ಎಕರೆ ನೀರಾವರಿಯಾಗುತ್ತದೆ. ಇದರಿಂದ ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ.

Sri D. M. SIDDAIAH.—May I know whether the Krishna project has been taken up and if so in what period this is going to be finished?

Sri VEERENDRA PATIL.—We have already taken up this project and it is very difficult for me to say in what period it is going to be finished. We are trying to give more finance for accelerating the progress.

Disposal of cases referred to Vigilance Commision

238. Sri H. B. JWALANAIAH (Hassan).—

Will the Chief Minister be pleased to state :—

(*a*) the number of cases that were transferred from the Divisional Commissioner and the Director of Anti-Corruption to the Vigilance Commission (A list of cases may be furnished) ;

(*b*) the number of complaints about corruption and official misconduct that were reported to the Vigilance Commission by the Heads of the Departments and the Government from the date of formation of the Vigilance Commission up to 1-7-1968 (A list of such cases may be furnished) ;

(*c*) the number of cases that were disposed of by Vigilance Commission ;

(*d*) the number of cases in which orders were passed in respect of those that were referred to the Vigilance Commission ;

(*e*) the number of cases pending disposal as on 1-7-1968 ;

(*f*) the dates from which the cases mentioned in clause (*e*) are pending disposal (A statement of investigation and enquiry may be given) ?

A.—Sri VEERENDRA PATIL (Chief Minister).—

(*a*) (i)	From Divisional Commissioners	296
(ii)	From Director of Anti-corruption	715
	Total ...	1,011

It will not be in public interest to furnish a list of such cases which will necessarily involve disclosure of names of officials and also the nature of allegations being enquired into.

(*b*) 426.

As stated above, it will not be in public interest to compile and furnish such a list.

(*c*) 982.

(*d*) 209.

(*e*) 455.

(*f*) As per statement appended.

STATEMENT

Showing the details of pending cases.

Year		
1951-52	...	1
1952-53	...	1
1955-56	...	1
1956-57	...	4
1957-58	...	2
1958-59	...	5
1959-60	...	2
1960-61	...	6
1961-62	...	12
1962-63	...	30
1963-64	...	39
1964-65	...	64
1965-66	...	122
1966-67	...	55
1967 68	...	83
1968-69	...	28
Total	...	455

ಶ್ರೀ ಎಚ್. ಬಿ. ಜ್ವಾಲನಯ್ಯ.—ಇಲ್ಲಿ ಕೊಟ್ಟಿರತಕ್ಕ ಪೆಂಷ್ಮೆಯಲ್ಲಿ ಅಪರಾಧಿಗಳು ಎಷ್ಟು ಮತ್ತು ನಿರಪರಾಧಿಗಳೆಷ್ಟು ?

†ಶ್ರೀ ವೀರೇಂದ್ರ ಪಾಟೀಲ್.—ಆ ವರ್ತಮಾನ ನನ್ನಲ್ಲಿಲ್ಲ.

Sri J. P. SARWESH.—Will you kindly agree with me if I say that some officers of the Vigilance Commission are not men of integrity? I will show some instances to prove this.

Sri VEERENDRA PATIL.—Let him show some instances. Without showing any instance, how can I agree with him?

ಶ್ರೀ ಎಚ್ ಬಿ. ಜ್ವಾಲನಯ್ಯ.—ಸರ್ಕಾರದ ಪತಿಯಿಂದ ಬೇಕಾದ ವಿಷಯ ಆ ಅಯೋಗದವರಿಗೆ ಸಕಾಲಕ್ಕೆ ದೊರೆಯದೆ ಇದ್ದ ಕಾರಣ ಅನೇಕ ಕೇಸುಗಳಲ್ಲಿ ತೀರ್ಮಾನ ಸರ್ಕಾರಕ್ಕೆ ವಿರೋಧವಾಗಿದೆಯಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಕೇಳಿದ ವರ್ತಮಾನವೆಲ್ಲಾ ಸರ್ಕಾರದವರು ಒದಗಿಸಿದ್ದಾರೆ. ಅಂಥ ದೂರುಗಳ್ಯಾವುವೂ ನನ್ನ ಗಮನಕ್ಕೆ ಬಂದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ವಿಚಾರಣೆಯಾಗದೆ ಸಸ್ಪೆಂಡ್ ಮಾಡಿದವರನ್ನು ಪ್ರಮೋಷನ್ ಮಾಡಲು ಎಷ್ಟು ವರ್ಷಗಳು ಹಿಡಿಯುತ್ತವೆ ?

ಶ್ರೀ ವೀರೇಂದ್ರ ಪಾಟೀಲ್.—ಆ ಪ್ರಮೋಷನ್ ಅವರಿಗೆ ವಿಚಾರಣೆ ಆಗತಕ್ಕ ಕಾಲದಲ್ಲಿ ಲಭ್ಯವಾಗುವಂತಿದ್ದರೆ ಆ ವಿಚಾರಣೆಯ ಕಾಲದಲ್ಲಿ ಅದನ್ನು ನಿಲ್ಲಿಸಲಾಗುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ.—ಕಡಮೆ ಸಂಬಳ ಪಡೆಯತಕ್ಕ ಕೆಲವು ಸರ್ಕಾರಿ ನೌಕರರು ಬೆಂಗಳೂರಿನಲ್ಲಿ 4-5 ಮನೆಗಳನ್ನು ಮಾಡಿಕೊಂಡಿದ್ದರೆ ಅದನ್ನು ವಿಚಾರಣೆ ಮಾಡತಕ್ಕ ವ್ಯಾಪ್ತಿ ಆಯೋಗಕ್ಕೆ ಬರುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನಮಗೆ ದೂರನ್ನು ಕೊಟ್ಟರೂ ಬರುತ್ತೆ, ಅಥವಾ ಅವರಿಗೇ ನೇರವಾಗಿ ದೂರನ್ನು ಕೊಟ್ಟರೂ ಪರವಾ ಇಲ್ಲ. ಅವರು ವಿಚಾರಣೆ ಮಾಡಬಹುದು.

ಶ್ರೀ ಬಾಪೂಗೌಡ —ಕೆಲವು ಸಂದರ್ಭಗಳಲ್ಲಿ ವಿಜಿಲೆನ್ಸ್ ಕಮಿಷನ್ನಿನವರ ದೂರಿನ ಮೇರೆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿರತಕ್ಕದ್ದು ಸರ್ಕಾರದವರ ನಜರಿಗೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಪ್ರೈವೇಟಾಫೇಸಿ ಕೇಸಿದ್ದರೆ ಮಾಡಿರಬಹುದು.

ಶ್ರೀ ಎಚ್. ಬಿ. ಜ್ವಾಲನಯ್ಯ.—ವಿಜಿಲೆನ್ಸ್ ಕಮಿಷನರವರು ಕೊಟ್ಟಂಥ ತೀರ್ಮಾನವನ್ನು ತಳ್ಳಿ ಹಾಕಿರುವುದು ಸರ್ಕಾರದಲ್ಲಿ ಎಷ್ಟು ಕೇಸುಗಳು ಇವೆ ?

ಶ್ರೀ ವೀರೇಂದ್ರ ಪಾಟೀಲ್.—ಬಹುತಃ ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್‌ನಲ್ಲಿ ಈ ಮಾಹಿತಿ ಬರುತ್ತದೆ. ಸುಮಾರು 3 –4 ವರ್ಷಗಳಿಂದ ಯಾವ ಯಾವುದನ್ನು ತಳ್ಳಿಹಾಕಿದೆ ಎಂದು ಒಮ್ಮೆಗೆ ಹೇಳಲಿಕ್ಕೆ ಆಗುವುದಿಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ಕೆಲವು ಸಂಘ ಸಂಸ್ಥೆಗಳ ಹಣ ದುರುಪಯೋಗವಾದಾಗ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಆಗುತ್ತದೆ, ಮತ್ತು ವಿಜಿಲೆನ್ಸ್ ಕಮಿಷನ್‌ನವರ ಎನ್‌ಕ್ವೈರಿಯೂ ಆಗುತ್ತದೆ. ಆಗ ಯಾವ ರಿಪೋರ್ಟ್ ಮೇರೆ ತಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಕೆಲವು ಸಲ ನಾವೇ ವಿಜಿಲೆನ್ಸ್ ಕಮಿಷನ್‌ಗೆ ಕಳುಹಿಸಿದಾಗ ಅವರು ಎನ್‌ಕ್ವೈರಿ ಮಾಡಿ ರಿಪೋರ್ಟ್ ಕಳುಹಿಸುತ್ತಾರೆ ಅದರ ಮೇರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ, ಅವರೇ ಸುಮ್ಮೋ ಮೋಟೊ ಎನ್‌ಕ್ವೈರಿ ಮಾಡಿ ಕಳುಹಿಸಿದಾಗಲೂ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎನ್. ರಾಮಣ್ಣ.—ಸಸ್ಪೆನ್‌ಷನ್‌ಗೆ ಅವಕಾಶವಿದೆ ಎಂದು ಹೇಳಿದಿರಿ, ಇದರಿಂದ ಅಧಿಕಾರಿಗಳಿಗೆ ಬಹಳ ಕಷ್ಟವಾಗುತ್ತಾ ಇವೆ, ಜಾಗ್ರತೆ ಕೇಸುಗಳು ತೀರ್ಮಾನವಾಗದೇ ಕೊಳೆಯುತ್ತಾ ಇರತಕ್ಕ ಅನೇಕ ಸಂದರ್ಭಗಳು ಇವೆ, ಆದ್ದರಿಂದ ಅವರನ್ನು ಅಂತಹ ಸಂದರ್ಭದಲ್ಲಿ ಬೇರೆ ಕಡೆಗೆ ವರ್ಗ ಮಾಡಿ ಎನ್‌ಕ್ವೈರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈ ತರಹದ ವಿಷಯದಲ್ಲಿ ವಿಜಿಲೆನ್ಸ್ ಕಮಿಷನ್‌ನವರು ಯಾವ ತರಹ ಸಲಹೆ ಮಾಡುತ್ತಾರೆ ಅದರ ಮೇರೆ ಹೋಗಬೇಕಾದ್ದು ಸೂಕ್ತ ಮತ್ತು ಹೋಗಬೇಕಾದ್ದು ಅವಶ್ಯಕವಾದದ್ದು ಎಂದು ಅನಿಸುತ್ತದೆ.